ಅಧ್ಯಕ್ಷರು :- ಸಭೆಯನ್ನು ಒಂದು ಗಂಟೆಯ ಅವಧಿಯವರೆಗೆ ಮುಂದೂಡಲಾಗಿದೆ.

(ಸದನವು ಪುನಃ 4ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು)

ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠದಲ್ಲಿದ್ದರು.

ಶಾ ಸ ನ ರ ಚ ನೆ

ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಹಣಕಾಸಿನ ಸಚಿವರು):- ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು..

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ 1995ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು..

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2ಕ್ಕೆ ತಿದ್ದುಪಡಿ:

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ವಿಧೇಯಕದ ಖಂಡ 2ಕ್ಕೆ ತಿದ್ದುಪಡಿಯನ್ನು ಸದನದ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ತಿದ್ದುಪಡಿಯನ್ನು ಮಂಡಿಸಲಾಯಿತು..

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಯವ್ಯಯದಲ್ಲಿ ಪೆಟ್ರೋಲ್ ಬೆಲೆ 75 ಪೈಸೆ ಸೆಸ್ ಹಾಕಿದ್ದನ್ನು 25 ಪೈಸೆಗೆ ಕಡಿಮೆ ಮಾಡುವ ಪ್ರಸ್ತಾವವಾಗಿದೆ. ಅದಕ್ಕಾಗಿ ಈ ತಿದ್ದುಪಡಿಯನ್ನು ತಂದಿರತಕ್ಕಂಥಾದ್ದು.

ಇದನ್ನು ಮಾನ್ಯ ಸದಸ್ಯರು ಒಪ್ಪಬೇಕೆಂದು ಕೋರುತ್ತೇನೆ.

ತಿದ್ದುಪಡಿಯ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ 2ನೇ ಖಂಡವು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 3ಕ್ಕೆ ತಿದ್ದುಪಡಿ:

ಶ್ರೀ ಸಿದ್ದರಾಮಯ್ಯ :- ಅಧ್ಯಕ್ಷರೇ, ವಿಧೇಯಕದ ಖಂಡ 3 ಇದನ್ನು ಸಭೆಯು ಪರಾಮರ್ಶಿಸಲು ಕೈಗೆತ್ತಿಕೊಳ್ಳುವಾಗ ಅಧ್ಯಕ್ಷರೇ, ಕೃಷಿ ಆದಾಯ ತೆರಿಗೆ ಅಡಿಯಲ್ಲಿ ನಾವು ಆಸ್ತಿಯ ಮಿತಿಯಲ್ಲಿ 5 ಎಕರೆಗೆ ವಿನಾಯಿತಿ ಎಂದು ಹೇಳಿದ್ದೆವು, ಅದನ್ನು 5 ಎಕರೆಯಿಂದ 10 ಎಕರೆವರೆಗೆ ವಿನಾಯಿತಿ ಕೊಡಲಾಗಿದೆ. ಆದ್ದರಿಂದ 5 ಎಕರೆಗೆ ಬರಬೇಕಾಗಿದ್ದ 10 ಎಕರೆಯಷ್ಟು ಭೂಮಿ ಬಂದು ತಿದ್ದುಪಡಿ ಇದೆ. ಇದನ್ನು ಮಾನ್ಯ ಸದಸ್ಯರು ಒಪ್ಪಬೇಕೆಂದು ಕೋರುತ್ತೇನೆ.

ತಿದ್ದುಪಡಿಯ ಪ್ರಸ್ತಾವ ಅಂಗೀಕಾರವಾಯಿತು

(ತಿದ್ದುಪಡಿಯಾದ 3ನೇ ಖಂಡವು ವಿಧೇಯಕದ ಅಂಗವಾಯಿತು)

ವಿಧೇಯಕದ ಖಂಡ 4ಕ್ಕೆ ತಿದ್ದುಪಡಿ:

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೇ, ಇದು ಪ್ರೊಫೆಶನಲ್ ಟ್ಯಾಕ್ಸ್ ಮೇಲೆ 10 ಪರ್ಸೆಂಟ್ ಟ್ಯಾಕ್ಸ್ ಹಾಕಿತ್ತು. ಅದನ್ನು 10 ಪರ್ಸೆಂಟ್‌ನಿಂದ 5 ಪರ್ಸೆಂಟಿಗೆ ಕಡಿಮೆ ಮಾಡಲಾಗಿದೆ. ಅದಕ್ಕಾಗಿ ಈ ತಿದ್ದುಪಡಿ, ಮಾನ್ಯ ಸದಸ್ಯರು ಇದನ್ನು ಒಪ್ಪಬೇಕೆಂದು ಕೋರುತ್ತೇನೆ.

ತಿದ್ದುಪಡಿಯ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ 4ನೇ ಖಂಡವು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 5ರಿಂದ 8ರವರೆಗೆ :

ಅಧ್ಯಕ್ಷರು :- 5 ರಿಂದ 8ರವರೆಗಿನ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(5ರಿಂದ 8ರವರೆಗಿನ ಖಂಡಗಳು ವಿಧೇಯಕದ ಅಂಗವಾಯಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಅನುಮೋದನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಹಣಕಾಸಿನ ಸಚಿವರು):- ಮಾನ್ಯ ಅಧ್ಯಕ್ಷರೇ, ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ 1995 ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ 1995ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ 1995 ಅನ್ನು ತಿದ್ದುಪಡಿ ಮಾಡುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕೆ.ಎಸ್.ಬೇಳಗಿ (ಸಾರಿಗೆ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ